


ಕಲ್ಯಾಣಿ ನಿಧಾನಕ್ಕೆ ತಿನ್ನುತ್ತ ಚಿಕ್ಕಿಯ ಯೋಗಕ್ಷೇಮ ವಿಚಾರಿಸತೊಡಗಿದಳು. ವಯಸ್ಸಿನ ಪ್ರಭಾವದಿಂದ ಅವಳ ನಡಿಗೆ ಕೊಂಚ ನಿಧಾನವಾಗಿತ್ತು. ನೀಳಕೇಶರಾಶಿಯಲ್ಲಿ ಸಾಕಷ್ಟು ಬೆಳ್ಳಿಗೆರೆಗಳು ಮೂಡಿದ್ದವು. ಆದರೆ ಮುಖದಲ್ಲಿ ಅದೇ ಪ್ರೀತಿಯ ಮುಗ್ಧ ನಗೆ, ಚಿಕ್ಕಿಯ ಮಗಳು, ಮಾವನ ಮಗಳು ಎಲ್ಲಾ ದೊಡ್ಡವರಾಗಿ ಮದ್ವೆಗಿದ್ವೆ ಮಾಡಿಸ್ಕಂಡು ಅವರವರ ಊರು ಸೇರಿದ್ದರು. ಹೆಂಡತಿ ಸತ್ತ ಮೇಲೆ ಮಾವ ಹಾಗೂ ತನ್ನ ಮನೆ ತಪ್ಪಿದ ಚಿಕ್ಕಿ ಈ ತೊಟ್ಟಿ ಮನೆಯ ಸಾಕ್ಷಿಪ್ರಜ್ಞೆಯಾಗಿ ಉಳಿದಿದ್ದರು.

★★★